ದತ್ತೋ ಬಾಬೂ ಹೇಳುತ್ತಾರೆ, 'ಆರೋಗ್ಯ ಸರಿಯಿಲ್ಲ. ವೈದ್ಯರಿಗೆ ತೋರಿಸಬೇಕು. ಬಿ.ಪಿ. ಟೆಸ್ಟ್ ಮಾಡಿಸಬೇಕು.'

ದಾಸ್ ಬಾಬೂ ಹೇಳುತ್ತಾರೆ, 'ತಡ ಮಾಡಬೇಡಿ. ಇವತ್ತೇ ಹೋಗಿ ವೈದ್ಯರಿಗೆ ತೋರಿಸಿ.'

ದತ್ತೋ ಬಾಬೂ ಹೇಳುತ್ತಾರೆ, 'ನೋಡ್ತೀನಿ... ನೀವು ಹೇಗಿದ್ದೀರ?'

'ಸರಿಯಿಲ್ಲ.'

'ಏಕೆ?'

'ಆಗಾಗ ಎದೆಯಲ್ಲಿ ನೋವು ಕಾಣಿಸಿಕೊಳ್ಳುತ್ತೆ.'

'ಇದು ಕೆಟ್ಟ ಲಕ್ಷಣ. ಇನ್ನು ಇದನ್ನು ಕಡೆಗಣಿಸಬೇಡಿ. ಬೇಗ ಒಳ್ಳೆ ಹಾರ್ಟ್ ಸ್ಪೆಶಲಿಸ್ಟ್‌ಗೆ ತೋರಿಸಿ.'

'ಇನ್ನು ಡಾಕ್ಟರ್‌ಗೆ ತೋರಿಸಲ್ಲ.'

'ಏಕೆ?'

'ತುಂಬಾ ದಿನ ಬದುಕಿದ್ದಾಯ್ತು. ಇನ್ನೂ ಬದುಕುವ ಆಸೆಯಿಲ್ಲ. ನನಗೆ ಈ ವಯಸ್ಸಿನಲ್ಲೂ ನೆಮ್ಮದಿಯಿಲ್ಲ ಎಂಬುದನ್ನು ನೀವೂ ನೋಡ್ತಿದ್ದೀರ. ಅಡುಗೆ ಮಾಡುವ ಕೆಲಸವೊಂದನ್ನು ಬಿಟ್ಟು ಬೇರೆಲ್ಲವನ್ನೂ ನಾನು ಮಾಡಬೇಕಾಗುತ್ತೆ. ಇನ್ನು ನನ್ನಿಂದ ಸಹಿಸೋದಕ್ಕೆ ಸಾಧ್ಯವಿಲ್ಲ.'

'ಸಹಿಸೋದಕ್ಕಾಗಲ್ಲ ಅಂದ್ರೆ! ಹೀಗೆ ಹೇಳಿದರೆ ಆಗಲ್ಲ. ನಾವು ನಮ್ಮ ಪರಿವಾರವನ್ನು ಜೀವನಪರ್ಯಂತ ನೋಡಲೇಬೇಕಿದೆ.'

'ಈಗ ನನಗೆ ಆಗಾಗ ಏನು ಅನ್ನಿಸುತ್ತೆ, ನಿಮಗ್ಗೊತ್ತಾ?'

'ಏನು?' ದತ್ತೋ ಬಾಬೂ ಕುತೂಹಲದಿಂದ ಕೇಳುತ್ತಾರೆ.

'ಮದುವೆ ಮಾಡಿಕೊಳ್ಳದಿದ್ದರೆ ಚೆನ್ನಾಗಿತ್ತು. ನಮಗೆ ಪರಿವಾರವೇ ಇರುತ್ತಿರಲಿಲ್ಲ; ಇಷ್ಟು ದೊಡ್ಡ ಜವಾಬ್ದಾರಿಯನ್ನು ಸಹ ಹೊರಬೇಕಿರಲಿಲ್ಲ. ನಾವು ನಿಶ್ಚಿಂತರಾಗಿರಬಹುದಿತ್ತು.'

'ನಿಮ್ಮ ಈ ಯೋಚನೆ ಉಚಿತವಲ್ಲ.'

ಈ ಉತ್ತರ ಕೇಳಿ ದಾಸ್ ಬಾಬು ಕಳವಳದಿಂದ ಹೇಳುತ್ತಾರೆ, 'ಉಚಿತವೋ, ಅನುಚಿತವೋ ಗೊತ್ತಿಲ್ಲ; ಆದರೆ ನೀವೊಂದು ಪ್ರಶ್ನೆಗೆ ಉತ್ತರಿಸುವಿರ?'

'ಏನು?'

'ನಾವು ನಮ್ಮ ಪರಿವಾರಕ್ಕೆ ಕಡಿಮೆ ಶ್ರಮವಹಿಸಿಲ್ಲ. ನಮ್ಮ ಪರಿಶ್ರಮದಿಂದಲೇ ನಮ್ಮ ಪರಿವಾರ ಇಂದು ಈ ಸ್ಥಿತಿಗೆ ಬಂದಿದೆ. ಆದರೆ ಇದಕ್ಕೆ ಪ್ರತಿಯಾಗಿ ಪರಿವಾರ ನಮಗೇನು ಕೊಟ್ಟಿದೆ? ನಾವು ವಿಶೇಷವಾಗಿ ಏನನ್ನೂ ಬಯಸುತ್ತಿರಲಿಲ್ಲ. ನಮಗೆ ಸ್ವಲ್ಪ ಪ್ರೀತಿ ಮತ್ತು ಗೌರವ ಬೇಕಿತ್ತು, ಅಷ್ಟೆ. ನೀವು ನಿಮ್ಮ ಎದೆಯ ಮೇಲೆ ಕೈಯಿಟ್ಟುಕೊಂಡು ಹೇಳಿ, ನಿಮ್ಮ ಹೆಂಡತಿ ನಿಜವಾಗಿಯೂ ನಿಮ್ಮನ್ನು ಪ್ರೀತಿಸುವಳೇ? ನಿಮ್ಮ ಮಗ ನಿಮ್ಮ ಬಗ್ಗೆ ಒಮ್ಮೆಯಾದರೂ ಯೋಚಿಸುವನೇ? ನಿಮ್ಮ ಮಗಳು ಯೋಚಿಸುವಳೇ? ಮೊಮ್ಮಗ-ಮೊಮ್ಮಗಳು, ಮಕ್ಕಳು ಸಹ ನಿಮ್ಮ ಬಗ್ಗೆ ಯೋಚಿಸುವರೇ? ನಿಮ್ಮ ಬಗ್ಗೆ ಯಾರಿಗೂ ಯಾವುದೇ ಭಾವನೆಯಿಲ್ಲವೆಂದು ಹೇಳಬೇಕಾಗುತ್ತದೆ. ಅವರಿಗೆ ಯಾವುದೇ ಚಿಂತೆಯಿಲ್ಲ. ಆದರೆ ಅವರಿಗೆ ನೀವು ಕಟ್ಟಿದ ಮನೆಯ ಬಗ್ಗೆ, ನಿಮ್ಮ ಬ್ಯಾಂಕಿನಲ್ಲಿರುವ ಹಣದ ಬಗ್ಗೆ, ಪೋಸ್ಟ್ ಆಫೀಸ್‌ನಲ್ಲಿರುವ ನಿಮ್ಮ ಸರ್ಟಿಫಿಕೇಟ್ ಬಗ್ಗೆ ಚಿಂತೆಯಿದೆ. ತಿಳೀತಾ?'

ಇದನ್ನು ಕೇಳಿ ದತ್ತೋ ಬಾಬೂ ನಗುತ್ತಾ ಹೇಳುತ್ತಾರೆ, 'ತಿಳೀತು. ಆದರೆ ಈಗ ತಿಳಿದು ಉಪಯೋಗವಿಲ್ಲ' ಎಂದು ದತ್ತೋ ಬಾಬೂ ಚಹಾದ ಹಣ ಕೊಟ್ಟು ಎದ್ದು ನಿಲ್ಲುತ್ತಾರೆ. ದಾಸ್ ಬಾಬೂ ಸಹ ತಮ್ಮ ಚಹಾದ ದುಡ್ಡು ಕೊಟ್ಟು ಎದ್ದು ನಿಲ್ಲುತ್ತಾರೆ.

ಆಚಾರ್ಯ ಪ್ರಫುಲ್ಲ ಚಂದ್ರ ರಸ್ತೆ. ಇದು ವಿಶಾಲ ರಸ್ತೆಯಾಗಿದೆ. ರಸ್ತೆಯ ಮಧ್ಯೆ ಟ್ರಾಮ್ ಲೈನ್‌ಗಳು ಹಾಸಿವೆ. ದಾಸ್ ಬಾಬೂ ತುಂಬಾ ಎಚ್ಚರಿಕೆಯಿಂದ ಅತ್ತ-ಇತ್ತ ಗಮನಿಸುತ್ತಾ ರಸ್ತೆಯನ್ನು ದಾಟುತ್ತಾರೆ. ರಸ್ತೆಯನ್ನು ದಾಟಿದ ನಂತರ ಗರಪಾರ್ ರಸ್ತೆಗೆ ಬರುತ್ತಾರೆ. ಅಲ್ಲಿಗೆ ಬಂದೊಡನೆಯೇ ಫುಟ್‌ಪಾತ್ ಮೇಲೆ ಮೆಲ್ಲ-ಮೆಲ್ಲನೆ ಹೆಜ್ಜೆಗಳನ್ನು ಹಾಕುತ್ತಾರೆ.

ಒಬ್ಬ ಕೇಳುತ್ತಾನೆ, 'ಪೇಟೆಯಲ್ಲಿ ಖರೀದಿ ಮುಗೀತಾ?'

ದಾಸ್ ಬಾಬೂ ಹೇಳುತ್ತಾರೆ, 'ಮಗೀತು.' ದಾಸ್ ಬಾಬೂ ಮುಂದುವರೆದು ಹೋಗುತ್ತಾರೆ. ಇನ್ನೊಬ್ಬ ಕೇಳುತ್ತಾನೆ, 'ಹೇಗಿದ್ದೀರ?' ದಾಸ್ ಬಾಬೂ ಹೇಳುತ್ತಾರೆ, 'ಚೆನ್ನಾಗಿದ್ದೇನೆ.'

ಈ ಉತ್ತರ ಸಮರ್ಪಕವಲ್ಲ. ದಾಸ್ ಬಾಬೂ ಅವರ ಆರೋಗ್ಯ ಹದಗೆಟ್ಟಿದೆ. ಅವರ ಎದೆಯಲ್ಲಿ ಈಗಲೂ ನೋವಿದೆ. ನಡೆಯಲು ಕಷ್ಟವಾಗುತ್ತಿದೆ.